ಕೋರಮಂಗಲದ ಕ್ರೀಡಾಗ್ರಾಮದಲ್ಲಿ ನಿರ್ಮಿಸಿರುವ ಫ್ಲಾಟ್‌ಗಳು

925 (930) ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋರಮಂಗಲದ ಕ್ರೀಡಾ ಗ್ರಾಮದಲ್ಲಿ ಎಷ್ಟು ಫ್ಲಾಟ್‌ಗಳನ್ನು ನಿರ್ಮಿಸಲಾಗಿದೆ;

ಆ) ಇದಕ್ಕಾಗಿ ಖರ್ಚು ಮಾಡಿದ ಹಣವೆಷ್ಟು;

ಇ) ಇ ಫ್ಲಾಟುಗಳು ಯಾವಾಗ ಪೂರ್ಣಗೊಂಡವು.

ಈ) ಈ ಫ್ಲಾಟ್‌ಗಳ ಪೈಕಿ ಎಷ್ಟು ಫ್ಲಾಟುಗಳನ್ನು ಈಗಾಗಲೇ ಮಾರಾಟ ಮಾಡಲಾಗಿದೆ;

ಉ) ಎಷ್ಟು ಫ್ಲಾಟ್‌ಗಳು ಖಾಲಿ ಇವೆ;

ಊ) ಈ ಫ್ಲಾಟ್‌ಗಳನ್ನು ಮಾರಾಟ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) ಕೋರಮಂಗಲದ ಕ್ರೀಡಾ ಗ್ರಾಮದಲ್ಲಿ ಒಟ್ಟು 2534 ಫ್ಲಾಟ್‌ಗಳನ್ನು ನಿರ್ಮಿಸಲಾಗಿದೆ.

ಆ) ಇದಕ್ಕಾಗಿ ಖರ್ಚು ಮಾಡಿದ ಒಟ್ಟು ಹಣ ಸುಮಾರು 314.00 ಕೋಟಿ ರೂಪಾಯಿಗಳು.

ಇ) ಮೊದಲನೇ ಹಂತದ ಫ್ಲಾಟ್‌ಗಳು 1996 ರಲ್ಲಿ ಮುಗಿದಿವೆ. ಎರಡನೇ ಹಂತದಲ್ಲಿ ಬಹುತೇಕ ಮನೆಗಳು ಪೂರ್ಣಗೊಂಡಿದ್ದು, ಕೆಲವು ಮನೆಗಳಲ್ಲಿ ಸಣ್ಣ ಪ್ರಮಾಣದ ಫಿನಿಷಿಂಗ್ ಕಾಮಗಾರಿಗಳು ಬಾಕಿ ಇರುತ್ತವೆ.

ಈ) ಈ ಫ್ಲಾಟುಗಳ ಪೈಕಿ ಒಟ್ಟು 1506 ಫ್ಲಾಟುಗಳನ್ನು ಈಗಾಗಲೇ ಮಾರಾಟ ಮಾಡಲಾಗಿದೆ.

ಉ) ಒಟ್ಟು 1028 ಫ್ಲಾಟುಗಳು ಖಾಲಿ ಇವೆ.

ಊ) ಈ ಫ್ಲಾಟುಗಳನ್ನು ಮಾರಾಟ ಮಾಡಲು ಸರ್ಕಾರವು ಈ ಹಿಂದೆ ಒಂದು ಅಡಿಗೆ ರೂ. 1500.00 ರಂತೆ ನಿಗಧಿಪಡಿಸಲಾಗಿತ್ತು. ಈ ದರದಂತೆ ಹೆಚ್ಚು ಮನೆಗಳು ಮಾರಾಟವಾಗದೆ ಉಳಿದಿದ್ದರಿಂದ ಸರ್ಕಾರವು ಮಾರಾಟ ದರಗಳನ್ನು ವಿವಿಧ ಸಂಘಸಂಸ್ಥೆಗಳಿಗೆ ಅನ್ವಯಿಸುವಂತೆ ಕಡಿಮೆ ಮಾಡಿ ಸ್ಲ್ಯಾಬ್ ದರಗಳನ್ನು ನಿಗಧಿಪಡಿಸಿ ದಿನಾಂಕ 31.-3-99 ರಂದು ಆದೇಶವನ್ನು ಹೊರಡಿಸಿರುತ್ತದೆ. ಆದರೂ ಸಹ ಹೆಚ್ಚು ಮನೆಗಳು ಮಾರಾಟವಾಗದೆ ಉಳಿದಿದ್ದುದರಿಂದ ಸರ್ಕಾರವು ಜನ ಸಾಮಾನ್ಯರಿಗೂ ಅನ್ವಯಿಸುವಂತೆ ಒಂದು ಚದುರ ಅಡಿಕೆ ರೂ. 1250.00 ರಂತೆ ದರ ಕಡಿಮೆ ಮಾಡಿ ಹಾಗೂ ವಿವಿಧ ಸಂಸ್ಥೆಗಳಿಗೂ ಹಾಗೂ ಗುಂಪಿನಲ್ಲಿ ಬರುವ ಜನ ಸಾಮಾನ್ಯರಿಗೂ ಸಹ ಸ್ಲ್ಯಾಬ್ ದರವನ್ನು ಕಡಿಮೆ ಮಾಡಿ ನಿಗಧಿಪಡಿಸಿ, ಸರ್ಕಾರ ಆದೇಶವನ್ನು ದಿನಾಂಕ. 16-1-2001ರಲ್ಲಿ ಹೊರಡಿಸಲಾಗಿದೆ.